ರಾಜ್ಯದಲ್ಲಿ ಸ್ಥಾಪಿಸಲಾದ ಬೃಹತ್ ಕೈಗಾರಿಕೆಗಳು

60(364) ಶ್ರೀ ಪಾಟೀಲ್ ಡಿ.ಆರ್.(ಗದಗ್) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಹಿಂದಿನ ಸರ್ಕಾರದ ಅಧಿಕಾರವಧಿಯಲ್ಲಿ ರಾಜ್ಯದಲ್ಲಿ ಸ್ಥಾಪಿಸಲಾದ ಒಟ್ಟು ಬೃಹತ್ ಕೈಗಾರಿಕೆಗಳು ಎಷ್ಟು ;

ಆ) ಇವುಗಳ ಒಟ್ಟು ಯೋಜನಾ ವೆಚ್ಚವೆಷ್ಟು ;

ಇ) ಅವುಗಳಲ್ಲಿ ಎಷ್ಟು ಬಂಡವಾಳ ಹೂಡಲಾಗಿದೆ ;

ಈ) ಇವುಗಳಿಂದ ಸೃಷ್ಟಿಯಾದ ಉದ್ಯೋಗಾವಕಾಶಗಳು ಎಷ್ಟು ;

ಉ) ಸರ್ಕಾರ ಈ ಕೈಗಾರಿಕೆಗಳ ನೀಡಿದ ರಿಯಾಯಿತಿಗಳ ಒಟ್ಟು ಮೌಲ್ಯ ಎಷ್ಟು ;

ಊ) ಈ ಉದ್ಯಮಗಳ ಸ್ಥಾಪನೆಯಿಂದ ರಾಜ್ಯದ ಬೊಕ್ಕಸಕ್ಕೆ ಬಂದ ಲಾಭ ಎಷ್ಟು ;

ಋ) ಪ್ರದೇಶಾಭಿವೃದ್ಧಿಗೆ ಈ ಉದ್ಯಮಗಳ ಕೊಡುಗೆ ಏನು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಹಿಂದಿನ ಸರ್ಕಾರದ ಅಧಿಕಾರಾವಧಿಯಲ್ಲಿ ರಾಜ್ಯದಲ್ಲಿ ಒಟ್ಟು 20 ಬೃಹತ್ ಕೈಗಾರಿಕೆಗಳು ಸ್ಥಾಪನೆಗೊಂಡಿರುತ್ತವೆ.

ಆ) ಇವುಗಳ ಒಟ್ಟು ಯೋಜನಾ ವೆಚ್ಚ ಸುಮಾರು ರೂ. 5447.19 ಕೋಟಿಗಳು ಆಗಿರುತ್ತದೆ.

ಇ) ಇವುಗಳಲ್ಲಿ ಹೂಡಿರುವ ಬಂಡವಾಳ ಸುಮಾರು ರೂ 4672.88 ಕೋಟಿಗಳು ಆಗಿರುತ್ತದೆ.

ಈ) ಇವುಗಳಿಂದ ಸುಮಾರು 8700 ಜನರಿಗೆ ಉದ್ಯೋಗಾವಕಾಶ ನೀಡಲಾಗಿದೆ.

ಉ) ಈ ಕೈಗಾರಿಕೆಗಳು ಬೃಹತ್ ಯೋಜನೆಗಳಾಗಿದ್ದು ಘಟಕದ ಉತ್ಪಾದನೆ ಹಾಗೂ ಮಾರುಕಟ್ಟೆ ಸಾಮರ್ಥ್ಯದ ಮೇಲೆ ರಿಯಾಯಿತಿಗಳನ್ನು ನೀಡಲಾಗುವುದು. ಹಾಗೂ ಕೈಗಾರಿಕಾ ನೀತಿಯ ಪ್ರಕಾರ ರಿಯಾಯಿತಿಗಳನ್ನು ಸಹ ನೀಡಲಾಗುವುದು. ಈ ಕೈಗಾರಿಕೆಗಳ ಪೈಕಿ 7 ಕೈಗಾರಿಕೆಗಳಿಗೆ ಸುಮಾರು ರೂ. 1278.11 ಕೋಟಿಗಳ ಮಾರಾಟ ತೆರಿಗೆ ವಿನಾಯಿತಿಯನ್ನು/ಮುಂದೂಡಿಕೆಯನ್ನು ನೀಡಲಾಗಿದೆ.

ಊ) ಈ ಕೈಗಾರಿಕೆಗಳಿಗೆ ನೀಡಿರುವ ತೆರಿಗೆ ವಿನಾಯಿತಿಗಳ/ ಮುಂದೂಡಿಕೆ ಕಾಲಾವಧಿ ಮುಗಿದ ನಂತರ ರಾಜ್ಯದ ಬೊಕ್ಕಸಕ್ಕೆ ಲಾಭವಾಗುವುದು.

ಋ) ಕೆಲವು ಕೈಗಾರಿಕೆಗಳು ಸ್ಥಳೀಯ ಜನರಿಗೆ ಉದ್ಯೋಗ ನೀಡಿದ್ದು, ತಮ್ಮ ಸುತ್ತಮುತ್ತಲಿನ ಹಳ್ಳಿಯ ಶಾಲೆಗಳ ದುರಸ್ತಿ ಕಾರ್ಯಕ್ರಮಗಳಲ್ಲಿ ಹಾಗೂ ಇತರೇ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದು ಪ್ರದೇಶಾಭಿವೃದ್ಧಿಗೆ ಪಾತ್ರರಾಗಿರುತ್ತಾರೆ.

- **ಶ್ರೀ ಡಿ ಆರ್ ಪಾಟೀಲ್** : ಮಾನ್ಯ ಅಧ್ಯಕ್ಷರೇ, ಹೋದ ಅವಧಿಯಲ್ಲಿ 20 ಬೃಹತ್ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದ್ದೇವೆ ಎಂದು ಹೇಳಿದಿರಿ. ಅದರಲ್ಲಿ 7 ಕೈಗಾರಿಕೆಗಳಿಗೆ 12078 ಕೋಟಿ ರೂಪಾಯಿಗಳ ವಿನಾಯಿತಿಯನ್ನು ಮುಂದೂಡಿಕೆಯನ್ನು ನೀಡಲಾಗಿದೆ. ಎಂದು ಹೇಳಿದಿರಿ. ಈ 7 ಕೈಗಾರಿ[illegible]ಂದರೆ ಅವರು ಇಕ್ವಿಟಿ ಪಾರ್ಟಿಸಿಪೇಶನ್ ಎಷ್ಟು ಆಗಿದೆ ಮತ್ತು ಅವರು ಎಷ್ಟು [illegible]ಥ್ಯವೈಡ್ ಮಾಡಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಡಿ ಆರ್ ಪಾಟೀಲ್‌ರವರ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಟ್ಟಿದ್ದೇನೆ. ಹಿಂದಿನ ಸರ್ಕಾರದ ಅವಧಿಯಲ್ಲಿ 20 ಬೃಹತ್ ಕೈಗಾರಿಕೆಗಳು ಸ್ಥಾಪನೆಗೊಂಡಿರುತ್ತದೆ. ಇದರಲ್ಲಿ ಯೋಜನೆ ವೆಚ್ಚ 647 ಕೋಟಿ ರೂಪಾಯಿಗಳು ಇವುಗಳಲ್ಲಿ ಸುಮಾರು ಬಂಡವಾಳ ಹಾಕಿರುವುದು 4600 ಕೋಟಿ ರೂಪಾಯಿಗಳು 8700 ಜನರಿಗೆ ಉದ್ಯೋಗದ ಅವಕಾಶ ನೀಡಲಾಗಿದೆ. ಈ ಏಳು ಕೈಗಾರಿಕೆಗಳು ಏನಿವೆ ಇದರಲ್ಲಿ ಮೊದಲನೆಯದು ಟಾಟಾ ಎಲೆಕ್ಟ್ರಿಕಲ್ ಕಂಪನಿಯಲ್ಲಿ ಇನ್‌ವೆಸ್ಟ್‌ಮೆಂಟ್ 237 ಕೋಟಿ ರೂಪಾಯಿಗಳು, ಎಂಪ್ಲಾಯ್‌ಮೆಂಟ್ 130, ಭಾರತಿ ಮೊಬೈಲ್ ಲಿ. 2203 ಕೋಟಿ ರೂ ಇನ್‌ವೆಸ್ಟ್‌ಮೆಂಟ್, 125 ಜನಕ್ಕೆ ಕೆಲಸ, ರಿಲೈಯನ್ಸ್ ಕಮ್ಯುನಿಕೇಷನ್ ಪ್ರೈವೇಟ್ ಲಿ. 300 ಕೋಟಿ ರೂಪಾಯಿಗಳ ಬಂಡವಾಳ, 525 ಜನಕ್ಕೆ ಕಸಬು, ಟಾಟಾ ಟೆಲಿಸರ್ವಿಸಸ್ ಎಂಟೈರ್ ಕರ್ನಾಟಕ 800 ಕೋಟಿ ರೂಪಾಯಿಗಳು 231 ಜನಕ್ಕೆ ಕೆಲಸ, Hutchison-Essar Ltd. 441 ಕೋಟಿ ರೂಪಾಯಿಗಳ ಬಂಡವಾಳ, 273 ಜನಕ್ಕೆ ಕೆಲಸ ಎಲ್ಲಾ 1000–1200 ಜನಕ್ಕೆ ಕೆಲಸ ಸಿಕ್ಕಿದೆ.

ಶ್ರೀ ಡಿ.ಆರ್. ಪಾಟೀಲ್ : ಇವರಿಗೆ ಏನು ಇನ್‌ಸೆಂಟಿವ್ ಕೊಟ್ಟಿರುತ್ತೀರಿ, ಆ ಪೀರಿಯಡ್ ಮುಗಿದ ಮೇಲೆ ಮತ್ತೆ ಎಕ್ಸ್‌ಟೆಂಡ್ ಮಾಡಿದ ಉದಾಹರಣೆ ಇದೆಯೇ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಬೇರೆ ರಾಜ್ಯಗಳಲ್ಲಿ ಇವತ್ತು ಸ್ಪರ್ಧೆ ಇದೆ, ನಮ್ಮಲ್ಲಿ ಬನ್ನಿ ಇಂಡಸ್ಟ್ರೀಸ್‌ಗಳನ್ನು ಪ್ರಾರಂಭ ಮಾಡಿ, ಬ್ಯಾಕ್‌ವರ್ಡ್ ಏರಿಯಾದಲ್ಲಿ ಮಾಡಿ, ಬೆಂಗಳೂರಿನಿಂದ ಅದೆ ಹೋಗಿ ಇನ್‌ಸೆಂಟಿವ್ ಕೊಡುತ್ತೇವೆಂದು ಹೇಳಲಾಗುತ್ತಿದೆ. ನಾವು ಇನ್‌ಸೆಂಟಿವ್ ಕೊಡದಿದ್ದರೆ ಬೇರೆ ರಾಜ್ಯಗಳವರು ಕೊಡುತ್ತಾರೆ. ಈಗ ಕೊಟ್ಟಿರುವುದು ಕೂಡ different payment 2001–2006 ಪಾಲಿಸಿಯಾದ ಮೇಲೆ ಎನೂ ಇಲ್ಲ. ಹಾಗಾಗಿ ಅದನ್ನು ಪುನರ್ ವಿಮರ್ಶೆ ಮಾಡುವ ಪ್ರಶ್ನೆ ಈಗಂತೂ ಉದ್ಭವವಾಗುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಈ ದೊಡ್ಡ ಉದ್ದಿಮೆದಾರರ ಬಗ್ಗೆ ಏನು ಕಳಕಳಿ ಇದೆ. ಇದನ್ನು ಖಾದಿ ಸೆಕ್ಟಾರ್ ಬಗ್ಗೆ, ಹ್ಯಾಂಡ್‌ಲೂಂ ಸೆಕ್ಟಾರ್ ಬಗ್ಗೆ ಏಕೆ ಇರುವುದಿಲ್ಲ. ನಿನ್ನೆ ಸಿ ಅಂಡ್ ಏಜ್ ರಿಪೋರ್ಟ್ ನೋಡಿದ್ದೆವು. ಆನ್ ಲೈನ್ ಲಾಟರಿಯವರು ಸುಮಾರು 250 ಕೋಟಿ ರೂಪಾಯಿಗಳು ಕೊಡಬೇಕಾಗಿತ್ತು. ಅವರದು ನೋಟಿಸ್ ಹೋಗವವರಿಗೆ ಡಿಮ್ಯಾಂಡ್ ಕೂಡ ಮಾಡಿರಲಿಲ್ಲ ಎಂದು ಹೇಳಿದರು. ಇಲ್ಲೇನಾದರೂ ಐದು ಕೋಟಿ ರೂಪಾಯಿಗಳ ರಿಬೇಟ್ ರಿಲೀಸ್ ಮಾಡಿ, ಐದು ಕೋಟಿ ರೂಪಾಯಿಗಳನ್ನು ಕೆಹೆಡ್‌ಡಿಸಿಗೆ ರಿಲೀಸ್ ಮಾಡಿ ಎಂದರೆ ಏನೂ ಮಾಡುವುದಿಲ್ಲ. ಏಕೆ ಅಂತ, ಅವರ ಬಗ್ಗೆ ಇರುವ ಕಳಕಳಿ ಈ ಸಣ್ಣವರ ಬಗ್ಗೆ ಏತಕ್ಕೆ ಇರುವುದಿಲ್ಲ ? ಇನ್ನು ಮುಂದುದಾದರೂ ಇದು ಇರುವಂತೆ ನೀವು ಮಾಡುತ್ತೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಅದು ಹೇಗೆಂದರೆ, ಯಾವುದೇ ಒಂದು ಸಣ್ಣ ಕೈಗಾರಿಕೆಗೆ ನಾವು ಪ್ರತ್ಯೇಕವಾದ ಪಾಲಿಸಿಯನ್ನು ಇಟ್ಟುಕೊಂಡಿದ್ದೇವೆ, ಟೈನಿ ಇಂಡಸ್ಟ್ರೀಸ್‌ಗೆ ಒಂದು ಪ್ರತ್ಯೇಕವಾದ ಪಾಲಿಸಿಯನ್ನು ಇಟ್ಟುಕೊಂಡಿರುತ್ತೇವೆ ಟೈನಿ ಇಂಡಸ್ಟ್ರೀಸ್ ಹಾಗೂ ಸಣ್ಣ ಕೈಗಾರಿಕೆಗಳು ಸರ್ವೈವ್ ಆಗಬೇಕಾದರೆ ಒಂದು ಆ್ಯಂಕರ್ ಇಂಡಸ್ಟ್ರಿ ಎಂದು ಇರಬೇಕಾಗುತ್ತದೆ. ಅದಕ್ಕೆ ಸಬ್ಸಿಡಿಯಾಗಿ ಈ ಎಲ್ಲಾ ಕೆಲಸವನ್ನು ಮಾಡಬಹುದು. ಆ್ಯಂಕರ್ ಇಂಡಸ್ಟ್ರಿ ಇಲ್ಲದೆ ಹೋದರೆ ಈ ಸಣ್ಣ ಕೈಗಾರಿಕೆಗಳು ಸರ್ವೈವ್ ಆಗುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ ನೀವು ಬೃಹತ್ ಪ್ರಮಾಣದ ಕೈಗಾರಿಕೆಗಳಿಗೆ ಮಾತ್ರ ಆದ್ಯತೆಯನ್ನು ಕೊಡುತ್ತೀರಿ, ಸಣ್ಣ ಕೈಗಾರಿಕೆಗಳವರಿಗೆ ಏನೂ

ಕೊಡುವುದಿಲ್ಲವೆನ್ನುವುದು ಅಷ್ಟೊಂದು ಸಮಂಜಸವಾಗಿ ಕಾಣುವುದಿಲ್ಲ. ಆದರೆ ತಾವೇ ಹೇಳಿದ್ದೀರಿ, ಖಾದಿ ಮತ್ತು ವಿಲೇಜ್ ಇಂಡಸ್ಟ್ರಿಸ್‌ಗೆ, ಇನ್‌ಫ್ಯಾಕ್ಟ್ ಒಂದು ಸ್ಟೆಪ್ ಮುಂದೆ ಹೋಗುತ್ತೇನೆ. ಇವತ್ತು ಸ್ತ್ರೀ ಶಕ್ತಿ ಸಂಘಗಳು ಎಲ್ಲಾ ಕಡೆ ಬೆಳೆದಿವೆ. ಅವರು ಮಾಡುವ ಪದಾರ್ಥಗಳಿಗೆ ಮಾರ್ಕೆಟಿಂಗ್ ಇಲ್ಲ, ಮಾರ್ಕೆಟಿಂಗ್ ಕೊಡಬೇಕಾದರೆ ಇದನ್ನು ಟೈ ಅಪ್ ಮಾಡಬೇಕಾಗುತ್ತದೆ. I am going one step further than you to encourage this.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಹಿಂದಿನ ಸರಕಾರದ ಅವಧಿಯಲ್ಲಿ ಒಟ್ಟು 5447.19 ಕೋಟಿ ರೂ. ಬಂಡವಾಳ ಹೂಡಿಕೆಯಾಗಿದೆ ಎಂದು ಮಾನ್ಯ ಸಚಿವರು ಹೇಳಿದರು. ಆದರೆ ಗ್ಲೋಬಲ್ ಇನ್‌ವೆಸ್ಟರ್ ಮೀಟ್ ಆದ ಕೂಡಲೆ 25000 ಮಿಕ್ಕ ಎಂಒಯು ಸಹಿ ಮಾಡಿದ್ದು, ಕೋಸ್ಟಲ್ ಇನ್‌ವೆಸ್ಟರ್ ಮೀಟ್ ಆದ ಮೇಲೆ ಅದರಲ್ಲಿ 5690–93 ಕೋಟಿ ರೂಪಾಯಿಗಳ ಎಂಒಯು ಸಹಿ ಮಾಡಲಾಗಿದೆ. ಅಂದರೆ 30–35 ಸಾವಿರ ಕೋಟಿ ರೂಪಾಯಿಗಳ ಎಂಒಯು ಸಹಿ ಮಾಡಿ 5 ವರ್ಷದಲ್ಲಿ ಇನ್‌ವೆಸ್ಟ್‌ಮೆಂಟ್ ಬಂದದ್ದು ಇಷ್ಟೆ. ಹಾಗಾದರೆ ಈ ಎಂಒಯು ಸಹಿ ಮಾಡಿದವರಿಗೆ ಲ್ಯಾಂಡ್ ಅಲಾಟ್ ಮಾಡಲಾಗಿದೆಯೇ ? ಅವರು ಎನೂ ಇನ್‌ವೆಸ್ಟ್‌ಮೆಂಟ್ ಮಾಡದೆ ಏಕೆ ವಾಪಸ್ ಹೋದರು ಎಂಬ ಬಗ್ಗೆ ಸಚಿವರು ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಇದೊಂದು ಪ್ರತ್ಯೇಕವಾದ ಪ್ರಶ್ನೆಯಾಗುತ್ತದೆ. ಎಂಒಯು ಎಂದರೇನು, ಮಾಡುತ್ತೇವೆ ಎನ್ನುವುದಕ್ಕೆ, ನೀವು ಮಾಡಿದರೆ ನಮ್ಮದೇನೂ ತಕರಾರಿಲ್ಲ ಇಲ್ಲವೆಂದು ಹೇಳುವುದಕ್ಕೆ ಒಂದು ಒಪ್ಪಿಗೆ ಹೊರತು ಮತ್ತೇನೂ ಸಹಿತ ಆಗಿಲ್ಲ. ಆದುದರಿಂದ ನಾನೇನು ಹೇಳುತ್ತೇನೆ, ಈಗ ಅಷ್ಟಾದರೂ ಬಂದಿದೆ. At least that much has come. that much has flown. Everybody will have an ambition plan. ನಾವು 50000 ಕೋಟಿ ರೂಪಾಯಿಗಳನ್ನು ತರುತ್ತೇವೆ ಎನ್ನುವ ದೃಷ್ಟಿಯಿಂದ ಇದನ್ನು ಗ್ಲೋಬಲ್ ಇನ್‌ವೆಸ್ಟ್‌ರ್ಸ್ ಮೀಟ್ ಮಾಡಿ. ಕೋಸ್ಟಲ್ ಇನ್‌ವೆಸ್ಟರ್ಸ್ ಮೀಟ್ ಮಾಡಿ, ಈಗ ನಾನೂ ಮಾಡುತ್ತಿದ್ದೇನೆ. ಮೈಸೂರಿನಲ್ಲಿ, ಗುಲ್ಬರ್ಗಾದಲ್ಲಿ ಮಾಡುತ್ತಿದ್ದೇವೆ. ಹಾಸನದಲ್ಲಿ ಮಾಡುತ್ತಿದ್ದೇವೆ. ಹುಬ್ಬಳ್ಳಿಯಲ್ಲಿ ಮಾಡುತ್ತಿದ್ದೇವೆ. ಮಾಡುವುದಕ್ಕೆ ಒಂದು ಅಟ್ಮಾಸ್ಪಿಯರನ್ನು ಅನ್ನು ನಾವು ಕ್ರಿಯೇಟ್ ಮಾಡಬೇಕಾಗುತ್ತದೆ ಅಂದರೆ ನೀವು ಹೇಳುವುದು ಏನು. Your intention of asking this question is that it should be transparent. Yes. It shall be transparent. I have already told you that it will be transparent.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಹೇಳಿದ ಪ್ರಕಾರ 7 ಉದ್ದಿಮೆಗಳಿಗೆ ಮಾತ್ರ ಆಗ ಅವರು ಹಣ ತೊಡಗಿಸಿದ್ದು ಸುಮಾರು 2000 ಕೋಟಿ ರೂಪಾಯಿಗಳೆಂದು ಅರ್ಥವಾಗುತ್ತದೆ. 2000 ಕೋಟಿ ರೂಪಾಯಿಗಳ ಹಣ ತೊಡಗಿಸಿದವರಿಗೆ 12078 ಕೋಟಿ ರೂಪಾಯಿಗಳ ವಿನಾಯಿತಿ ಕೊಟ್ಟಿರುವುದು ಡೆಫರ್ಡ್ ಪೇಮೆಂಟ್ ಎಂದು ಹೇಳುತ್ತಿದ್ದೀರಿ. ಒಂದು ವೇಳೆ ಡೆಫರ್ಡ್ ಪೇಮೆಂಟ್ ಇದ್ದಾಗಲೂ ಕೂಡ ಬ್ಯಾಂಕ್ ಗ್ಯಾರೆಂಟಿಯನ್ನು ತೆಗೆದುಕೊಳ್ಳದೆ ಇದ್ದರೆ ಎನ್ನುವ ಪ್ರಶ್ನೆ ಬಂದರೆ. ಮುಂದೆ ಇವರು ಕಾರ್ಖಾನೆಯನ್ನು ಮುಚ್ಚಿಕೊಂಡು ಹೋದರೆ ಎನ್ನುವ ಪ್ರಶ್ನೆ ನಮ್ಮಲ್ಲಿ ಉದ್ಭವವಾಗುವುದಕ್ಕೆ ಸಾಧ್ಯತೆ ಇದೆ. ಇವತ್ತು 600–700 ಕೋಟಿ ರೂಪಾಯಿಗಳಷ್ಟು ಸಬ್ಸಿಡಿಯನ್ನು ಕೊಟ್ಟರೆ. ಅವರ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಸಂಪೂರ್ಣವಾಗಿ ಬಂದ್ ಆಗುತ್ತದೆ.

ಆದುದರಿಂದ ಇದನ್ನು ಬ್ಯಾಂಕ್ ಗ್ಯಾರೆಂಟಿಯನ್ನು ತೆಗೆದುಕೊಂಡು ಮಾಡಿದ್ದೀರೊ ಹೇಗೆ ಎನ್ನುವುದನ್ನು ಸರ್ಕಾರವನ್ನು ನಾನು ಕೇಳಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಸಭಾಧ್ಯಕ್ಷರೆ, ಈ ವಿವರಗಳು ನನಗೆ ಗೊತ್ತಿಲ್ಲ. ಈಗ ಪ್ರಶ್ನೆಯನ್ನು ಕೇಳಿದ್ದಾರೆ ಉತ್ತರವನ್ನು ನಾನು ಒದಗಿಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ : ತಾವು ಕೆಹೆಚ್‌ಡಿಸಿ. ಖಾದಿ ಸೆಕ್ಟಾರ್‌ಗೆ ಮತ್ತು ಟೈನಿ ಇಂಡಸ್ಟ್ರಿಗೆ ಸಾಕಷ್ಟು ಅನುಕೂಲ ಮಾಡುತ್ತೇನೆ. ನಾವೇನು ವಿಚಾರ ಮಾಡಿದ್ದೇವೆ. ಅದಕ್ಕೂ ಒಂದು ಹೆಜ್ಜೆ ಮುಂದೆ ಹೋಗಿ ಮಾಡುತ್ತೇವೆ ಎನ್ನುವ ಭರವಸೆಯನ್ನು ತಾವು ಕೊಟ್ಟಿರಿ ; ಸಂತೋಷ ಮಂತ್ರಿಗಳಿಗೆ ಏನು ಕಳಕಳಿ ಇರುತ್ತದೆ. ಅದು ಬ್ಯುರೊಕ್ರಾಟಿಕ್ ಸೆಟ್-ಅಪ್‌ನಲ್ಲಿರುವುದಿಲ್ಲ. ಹಿಂದೆ ಫೈನಾನ್ಸ್ ಸೆಕ್ರೆಟರಿ ಹತ್ತಿರ, ಕೆಹೆಚ್‌ಡಿಸಿಗೆ ಒಂದು ಐದು ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿಸುವುದಕ್ಕೆ ನಾವು ಹತ್ತು ಸಾರಿ ಹೋದೆವು ರಿಲೀಸ್ ಆಗಲಿಲ್ಲ. ಆ ಆನ್ ಲೈನ್ ಲಾಟರಿಯವರದ್ದು ರಿಕವರಿ ಮಾಡುವುದಕ್ಕೆ ನೀವು ಎಫರ್ಟ್ ಮಾಡಲಿಲ್ಲ. ತಾರತಮ್ಯ ಏಕೆ ಎಂದು ನಾನು ಕೇಳುವುದು 5 ದೊಡ್ಡವರ ಬಗ್ಗೆ ಕಾಳಜಿ ಮಾಡುತ್ತೀರಿ ಸಣ್ಣವರ ಸಲುವಾಗಿ ಶಾಸಕರು ಬೆನ್ನತ್ತಿದರೂ ಕೂಡ ಹಣ ರಿಲೀಸ್ ಮಾಡುವಂತಹ ಕೆಲಸವನ್ನು ತಾವು ಮಾಡುವುದಿಲ್ಲ. ಈ ಮೈಂಡ್ ಸೆಟ್ ಬದಲಾವಣೆ ಮಾಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈ ಮೈಂಡ್ ಸೆಟ್ ಎನ್ನುವುದು. ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಿರುತ್ತದೆ. mindset ಅದನ್ನು ನಾನು ಹೇಗೆ ಬದಲಾವಣೆ ಮಾಡಲಾಗುತ್ತದೆ. ನಮ್ಮ ಆದ್ಯತೆ ಏನೆಂಬುದನ್ನು ನಾವು ನಿಮಗೆ ಹೇಳಿದ್ದೇವೆ. ಸ್ಮಾಲ್‌ಸ್ಕೇಲ್ ಇಂಡಸ್ಟ್ರಿಸ್‌ಗೆ ಬಾಕಿ ಇರುವ ಹಣವನ್ನು ಕೃಷ್ಣರವರೇ ಅದನ್ನು ಕೆಎಸ್‌ಎಫ್‌ಸಿಯಿಂದ ರೈಸ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದರು. ಈಗ 60 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಕೊಡಲಾಗಿದೆ. 140 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆಂದು ಹೇಳುತ್ತಿದ್ದೇವೆ. ಖಾದಿ ಇಂಡಸ್ಟ್ರಿಸ್ ಅನ್ನು ಸ್ಟಂಗ್ತನ್ ಮಾಡುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ನಾನು ಹೇಳಿದ್ದೇನೆ; In that sector, it all differs from person to person. as you are aware.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಕ್ತಾತಗೊಂಡಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ
ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಂ.ಪಿ. ಪ್ರಕಾಶ್ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, 23-7-2004ರ ಲಿಖಿತ ಮೂಲಕ ಉತ್ತರಿಸುವ 21 ಪ್ರಶ್ನೆಗಳ ಪೈಕಿ 18 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : *ಮಂಡಿಸಲಾಯಿತು* ಅನುಬಂಧ - I

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ
ವಿಷಯಗಳು : 1) ನಿಲುವಳಿ ಸೂಚನೆಗಳನ್ನು ತೆಗೆದುಕೊಳ್ಳುವ ಬಗ್ಗೆ

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ತಮಗೆ ನಾನೊಂದು ಅಡ್ಜರ್ಮೆಂಟ್ ಮೋಷನ್ ಕಳುಹಿಸಿಕೊಟ್ಟಿದ್ದೇವೆ.